**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಮುಳಬಾಗಿಲು.**

ಸಿ.ಸಿ.ನಂಃ **67/2026**

| | | |
|---|---|---|
| ಫಿರ್ಯಾದುದಾರರು | : | ಕೆ.ವಿ. ಶಂಕರ್.,<br>ಬಿನ್ಃ ವೆಂಕಟರಮಣ. |

-ವಿರುದ್ಧ-

| | | |
|---|---|---|
| ಆರೋಪಿ | : | ವಿ. ಗಟ್ಟಪ್ಪ,<br>ಬಿನ್ಃ ವರದಪ್ಪ. |

**ದಂಡ ಪ್ರಕ್ರಿಯಾ ಸಂಹಿತೆ ಕಲಂ-251 ರ ಪ್ರಕಾರ ಆರೋಪಣೆ**

ಆರೋಪಿಯಾದ ನೀವು, ಫಿರ್ಯಾದುದಾರರಿಂದ ಪಡೆದುಕೊಂಡ ಸೂಕ್ತ ಮೌಲ್ಯವುಳ್ಳ ಪ್ರತಿಫಲದ ಬಾಬ್ತು ಅವರಿಗೆ ಕೊಡಬೇಕಾಗಿರುವ ಹಣದ ಮರು-ಪಾವತಿಗಾಗಿ ಶ್ರೀನಿವಾಸಪುರ ತಾಲೂಕಿನ ಯಲ್ದೂರು ಶಾಖೆಯ ಎಸ್.ಬಿ.ಐ ಬ್ಯಾಂಕಿನ ಮುಂದಿನ ದಿನಾಂಕ ನಮೂದಿಸಿದ ಚೆಕ್ ನಂ.108421, ದಿನಾಂಕಃ13.11.2025 ರ ಚೆಕ್ಕನ್ನು ರೂ.2,50,000/- (ಎರಡು ಲಕ್ಷ ಐವತ್ತು ಸಾವಿರ ರೂಪಾಯಿ)ಗಳಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ನಗದುಗೊಳಿಸಲು ಮುಳಬಾಗಿಲು ಶಾಖೆಯ ಕರ್ಣಾಟಕ ಬ್ಯಾಂಕ್ ಲಿ., ಇಲ್ಲಿಗೆ ಹಾಜರುಪಡಿಸಿದಾಗ, ಸದರಿ ಚೆಕ್ಕು "**Exceeds Arrangement**' ಎಂಬ ಕಾರಣಕ್ಕಾಗಿ ಅನಾಧರಣಗೊಂಡಿರುತ್ತದೆ. ಈ ಬಗ್ಗೆ ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ನೋಟೀಸನ್ನು ದಿಃ09.12.2025 ರಂದು ನೀಡಿ, ಸದರಿ ಸಂಗತಿಯನ್ನು ತಿಳಿಸಿದಾಗ್ಯೂ ಸಹ ನೀವು ಫಿರ್ಯಾದುದಾರರಿಗೆ ನಿಯಮಿತ ಅವಧಿಯಲ್ಲಿ ಹಣವನ್ನು ಸಂದಾಯ ಮಾಡುವಲ್ಲಿ ವಿಫಲರಾಗಿರುತ್ತೀರಿ. ಆ ಕಾರಣದಿಂದ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಾಯ್ದೆಯ ಕಲಂ-138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಅಂತ ನಿಮ್ಮ ವಿರುದ್ಧ ಆರೋಪಣೆ ಹೊರಿಸಲಾಗಿದೆ.

**ಪ್ರ-1** ಮೇಲಿನ ಆರೋಪಣೆಯನ್ನು ಓದಿ ವಿವರಿಸಿದ್ದು ಅರ್ಥವಾಯಿತೇ?
ಉಃ

**ಪ್ರ-2** ವಿವಾದಿತ ಚೆಕ್ಕು ನಿಮ್ಮ ಬ್ಯಾಂಕ್ ಖಾತೆಗೆ ಸೇರಿರುತ್ತದೆಯೇ?
ಉಃ

**ಪ್ರ-3** ವಿವಾದಿತ ಚೆಕ್ಕಿನಲ್ಲಿರುವ ಸಹಿಯು ನಿಮ್ಮದು ಎಂದು ಒಪ್ಪಿಕೊಳ್ಳುತ್ತೀರಾ?
ಉಃ

**ಪ್ರ-4** ವಿವಾದಿತ ಚೆಕ್ಕನ್ನು ನೀವು ಫಿರ್ಯಾದುದಾರರಿಗೆ ನೀಡಿರುತ್ತೀರಾ?
ಉಃ

**ಪ್ರ-5** ಹಾಗಾದರೆ ವಿವಾದಿತ ಚೆಕ್ಕನ್ನು ನೀವು ಫಿರ್ಯಾದುದಾರರಿಗೆ ನೀಡುವ ಸಮಯದಲ್ಲಿ ಅವರಿಗೆ ಹಣವನ್ನು ಕೊಡುವ ಭಾದ್ಯತೆ ಇತ್ತೇ?
ಉಃ

**ಪ್ರ-6** ನಿಮ್ಮ ಬಾಧ್ಯತೆಯನ್ನು ಅಲ್ಲಗಳೆಯುವುದಾದರೆ ನಿರ್ದಿಷ್ಟವಾಗಿ ನಿಮ್ಮ ಪ್ರತಿರಕ್ಷಣೆಯನ್ನು ತಿಳಿಸಿ ಅಂದರೆ, ಚೆಕ್ಕನ್ನು ಕೇವಲ ಭದ್ರತೆಗಾಗಿ ನೀಡಲಾಗಿರುತ್ತದೆಯೇ ಅಥವಾ ಸಾಲವನ್ನು ಮರು-ಪಾವತಿಸಲಾಗಿದೆಯೇ ಅಥವಾ ಚೆಕ್ಕನ್ನು ತಿದ್ದುಪಡಿ ಮಾಡಲಾಗಿದೆಯೇ ಅಥವಾ ದುರುಪಯೋಗಪಡಿಸಿಕೊಳ್ಳಲಾಗಿದೆಯೇ ಅಥವಾ ಬೇರೆ ಕಾರಣಗಳು ಇರುತ್ತವೆಯೇ?
ಉಃ

**ಪ್ರ-7** ರಾಜೀ ಮಾಡಿಕೊಳ್ಳಲು ಇಚ್ಚಿಸುತ್ತೀರಾ?
ಉಃ

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ವಿವರಿಸಿ, ಆತ ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

**(ಹರೀಶ್ ಜಿ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ದಿಃ**30.05.2026** ಮುಳಬಾಗಿಲು.

ಆರೋಪಿ ಸಹಿ